**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ದಲಿತ ಸಂಸ್ಕೃತಿ ಅಧ್ಯಯನ ಪೀಠ**

**ನಾಡೋಜ ಕವಿ ಡಾ.ಸಿದ್ದಲಿಂಗಯ್ಯ ಅವರ**

**ಹೊಲೆಮಾದಿಗರ ಹಾಡು ಸಾಹಿತ್ಯ ಮತ್ತು ಸಾಮಾಜಿಕ ಪ್ರೇರಣೆ**

**ರಾಜ್ಯಮಟ್ಟದ ವಿಚಾರ ಸಂಕಿರಣದ** ಪತ್ರಿಕಾ ವರದಿ– 09.10.2024

# ಡಾ.ಸಿದ್ದಲಿಂಗಯ್ಯ ಅವರ ಹೊಲೆಮಾದಿಗರ ಹಾಡು ಜನ ಸಾಮಾನ್ಯರ ಅಸಾಮಾನ್ಯ ಕಾವ್ಯ : ಸುಬ್ಬು ಹೊಲೆಯರ್

ಡಾ. ಸಿದ್ದಲಿಂಗಯ್ಯ ಅವರ ಹೊಲೆಮಾದಿಗರ ಹಾಡು ಜನ ಸಾಮಾನ್ಯರ ಅಸಾಮಾನ್ಯ ಕಾವ್ಯ. ದಲಿತರ ಒಡಲಾಳದ ನೋವನ್ನು ಗ್ರಹಿಸಿ ರಚಿಸಿದ ಗೀತೆಯಿದು. ರಾಷ್ಟ್ರಕ್ಕೆ ರಾಷ್ಟ್ರಗೀತೆಯಂತೆ, ಈ ಹೊಲೆಮಾದಿಗರ ಹಾಡು ದಲಿತ ಸಮುದಾಯದ ಹೋರಾಟ ಗೀತೆಯಾಗಿ ಅವರನ್ನು ಎಚ್ಚರಗೊಳಿಸುವಲ್ಲಿ ಮಹತ್ತರ ಪಾತ್ರವಹಿಸಿದೆ ಎಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರು ಮತ್ತು ಚಿಂತಕರಾದ **ಸುಬ್ಬು ಹೊಲೆಯರ್** ಅವರು ಅಭಿಪ್ರಾಯಪಟ್ಟರು.



ಶ್ರೀ ಸುಬ್ಬು ಹೊಲೆಯರ್ ಅವರು, ಮಾನ್ಯ ಕುಲಪತಿಯವರು ಹಾಗೂ ವೇದಿಕೆಯ ಮೇಲಿನ ಗಣ್ಯರಿಂದ ಡಾ. ಸಿದ್ಧಲಿಂಗಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ಅರ್ಪಣೆ ಮಾಡುವ ಮೂಲಕ ಉದ್ಘಾಟಿಸಿ, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ **ದಲಿತ ಸಂಸ್ಕೃತಿ ಅಧ್ಯಯನ ಪೀಠ**ದಿಂದ ದಿನಾಂಕ 09ನೇ ಅಕ್ಟೋಬರ್ 2024ರಂದು ಆಯೋಜಿಸಿದ್ದ **ನಾಡೋಜ ಕವಿ ಡಾ.ಸಿದ್ದಲಿಂಗಯ್ಯ** ಅವರ **ಹೊಲೆಮಾದಿಗರ ಹಾಡು ಸಾಹಿತ್ಯ ಮತ್ತು ಸಾಮಾಜಿಕ ಪ್ರೇರಣೆ** ಎಂಬ **ರಾಜ್ಯಮಟ್ಟದ ವಿಚಾರ ಸಂಕಿರಣ**ವನ್ನು ಉದ್ಘಾಟಿಸಿ ಮಾತನಾಡಿದರು.

ಡಾ.ಸಿದ್ದಲಿಂಗಯ್ಯನವರು ಶತಮಾನಗಳಿಂದ ಧರ್ಮ, ದೇವರು, ಜಾತಿ ಹೆಸರಿನಲ್ಲಿ ತುಳಿತಕ್ಕೊಳಗಾಗಿದ್ದ ದಲಿತ ಸಮುದಾಯವನ್ನು ಹೊಲೆಮಾದಿಗರ ಹಾಡು ಕವನ ಸಂಕಲನದ ಮೂಲಕ ಬಡಿದ್ದೆಬ್ಬಿಸುವ ಕೆಲಸವನ್ನು ಮಾಡಿದರು. ನೊಂದವರ ನೋವು ನೋಯದವರೆತ್ತ ಬಲ್ಲರು ಎಂಬಂತೆ ಇತಿಹಾಸದಲ್ಲಿ ದಾಖಲಾಗಿರುವುದು ಬಹುತೇಕ ರಾಜ–ರಾಣಿಯರ ಚರಿತ್ರೆ. ಆದರೆ ಡಾ.ಸಿದ್ದಲಿಂಗಯ್ಯನವರು ಬಂಡಾಯ ಸಾಹಿತ್ಯದ ಮೂಲಕ ಜನ ಸಾಮಾನ್ಯರ ಚರಿತ್ರೆಯನ್ನು ಕಟ್ಟುವ ಕೆಲಸ ಮಾಡಿದರು. ದಲಿತ ಹೋರಾಟದ ಮೂಲಕ ಇಡೀ ಸಮುದಾಯದ ಕಣ್ಣು ತೆರೆಸಿದರು. ಯುವ ಜನರು ಸಮಾಜದಲ್ಲಿ ಬೇರು ಬಿಟ್ಟಿರುವ ಸಾವಿರಾರು ಸಂಕೋಲೆಗಳಿಂದ ಮುಕ್ತರಾಗಿ ಬದುಕಬೇಕು. ವೈಚಾರಿಕ ಚಿಂತನೆಯನ್ನು ಬೆಳಸಿಕೊಳ್ಳಬೇಕು. ದಲಿತರ ಹಕ್ಕುಗಳಿಗಾಗಿ ಪ್ರಜಾಸತ್ತಾತ್ಮಕ, ಅಹಿಂಸಾತ್ಮಕ ಹೋರಾಟಕ್ಕೆ ಸಿದ್ಧರಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ **ಮುಖ್ಯ ಅತಿಥಿಗಳಾದ ಶ್ರೀಮತಿ ರಮಾಕುಮಾರಿ ಸಿದ್ದಲಿಂಗಯ್ಯನವರು** ಮಾತನಾಡುತ್ತ, ಡಾ.ಸಿದ್ದಲಿಂಗಯ್ಯನವರು ನೊಂದವರನ್ನು, ಶೋಷಿತರನ್ನು ಎಚ್ಚರಿಸುವ ಮೂಲಕ ಸದಾ ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಇಂದು ಅವರು ನಮ್ಮ ಜೊತೆಯಿಲ್ಲದಿದ್ದರೂ ಅವರ ಪುಸ್ತಕಗಳ ಮೂಲಕ, ಕೆಲಸಗಳ ಮೂಲಕ ಜೀವಂತವಾಗಿದ್ದಾರೆ ಎಂದರು.




ಶ್ರೀ ಸುಬ್ಬು ಹೊಲೆಯರ್ ಅವರಿಂದ ಉದ್ಘಾಟನಾ ಭಾಷಣ

ಮತ್ತೊಬ್ಬ ಮುಖ್ಯ ಅತಿಥಿಗಳಾದ ಕನ್ನಡ ವಿಶ್ವವಿದ್ಯಾಲಯದ **ಸಿಂಡಿಕೇಟ್ ಸದಸ್ಯರಾದ ಸೋಮಶೇಖರ್ ಬಣ್ಣದ ಮನೆ** ಅವರು ಮಾತನಾಡುತ್ತ ದಲಿತ ಸಮುದಾಯದಲ್ಲಿ ತಮ್ಮ ಹಾಡಿನ ಮೂಲಕ ಅರಿವು ಮೂಡಿಸಿದ ಚಿಂತಕ ಡಾ.ಸಿದ್ದಲಿಂಗಯ್ಯ. ಇಂದಿಗೂ ದಲಿತರ ಮೇಲಿನ ದೌರ್ಜನ್ಯಗಳು ಆಗಾಗ ಕಂಡುಬರುತ್ತವೆ. ಇದು ನಿಲ್ಲಬೇಕು. ಡಾ. ಸಿದ್ದಲಿಂಗಯ್ಯನವರು ನಡೆಸಿದ್ದ ಸಾಮಾಜಿಕ ಸಮಾನತೆ ಮೂಡಿಸುವ ಕೆಲಸವನ್ನು ಪ್ರಸ್ತುತ ಯುವಜನತೆ ಮುನ್ನಡೆಸಬೇಕು ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ **ಡಾ.ಡಿ.ವಿ. ಪರಮಶಿವಮೂರ್ತಿ** ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತ, ಡಾ.ಸಿದ್ದಲಿಂಗಯ್ಯನವರು ಸಮಾಜಕ್ಕೆ ಮಾನವೀಯತೆಯನ್ನು ಹೇಳಿಕೊಟ್ಟ ಕವಿ. ಇಡೀ ದಲಿತ ಸಮುದಾಯಕ್ಕೆ ಘನತೆಯಿಂದ ಬದುಕಲು ಆತ್ಮಸ್ಥೈರ್ಯವನ್ನು ತುಂಬಿದ ಚೇತನ. ಈ ಹಿನ್ನೆಲೆಯಲ್ಲಿ ಹೊಲೆಮಾದಿಗರ ಹಾಡು ಸಂಕಲನದ ಪ್ರಸ್ತುತತೆಯನ್ನು ಮುಂದಿನ ಪೀಳಿಗೆಗೆ ತಿಳಿಸುವುದು ಬಹುಮುಖ್ಯ ಎಂದರು. ಇಂದಿಗೂ ದಲಿತ ಸಮುದಾಯಗಳಿಗೆ ಎಷ್ಟೋ ಸವಲತ್ತುಗಳು ಮರೀಚಿಕೆಯಾಗಿ ಉಳಿದಿವೆ. ಇವು ಇನ್ನಾದರೂ ಸಾಕಾರಗೊಳ್ಳಬೇಕು ಎಂದು ತಿಳಿಸಿದರು.




ಡಾ. ಸಿದ್ಧಲಿಂಗಯ್ಯ ಅವರ ಧರ್ಮಪತ್ನಿ ಶ್ರೀಮತಿ ರಮಾಕುಮಾರಿ ಸಿದ್ಧಲಿಂಗಯ್ಯ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ದಲಿತ ಸಂಸ್ಕೃತಿ ಅಧ್ಯಯನ ಪೀಠದ ಸಂಚಾಲಕರಾದ **ಡಾ.ಚಿನ್ನಸ್ವಾಮಿ ಸೋಸಲೆ** ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ, ಡಾ.ಸಿದ್ದಲಿಂಗಯ್ಯನವರ ಹೊಲೆಮಾದಿಗರ ಹಾಡು ದಲಿತ ಸಮುದಾಯದ ಸಂವೇದನೆಯನ್ನು ಪ್ರತಿನಿಧಿಸಿತು. ಈ ಹಾಡಿನ ಮೂಲಕ ಅಜ್ಞಾನ, ಮೌಢ್ಯ, ಸ್ವಾತಂತ್ರ್ಯ, ಸಂವಿಧಾನದ ಬಗ್ಗೆ ಪ್ರಶ್ನೆ ಮಾಡಿದರು. ಇದರಿಂದ ಇದು ಮನೆಮನೆಯ ಗೀತೆಯಾಯಿತು. ಈ ಹಾಡು ಹಲವಾರು ಪ್ರಜ್ಞಾವಂತರನ್ನು ಹುಟ್ಟುಹಾಕಿತು ಎಂದರು.

ಈ ಕಾರ್ಯಕ್ರಮದಲ್ಲಿ ಕುಲಸಚಿವರಾದ **ಡಾ.ವಿಜಯ್ ಪೂಣಚ್ಚ ತಂಬಂಡ** ಅವರು ಸ್ವಾಗತಿಸಿದರು. ಚರಿತ್ರೆ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ.ವಿರೂಪಾಕ್ಷಿ ಪೂಜಾರಹಳ್ಳಿ** ಅವರು ವಂದಿಸಿದರು. ಸಂಶೋಧನಾರ್ಥಿ **ಮಣಿಕಂಠ ಹಂಗಳ** ನಿರೂಪಿಸಿದರು. ಹೊಸಪೇಟೆಯ ಪದವಿ ಕಾಲೇಜಿನ ಪ್ರಾಂಶುಪಾಲರಾದ **ನಾಗರಾಜ ಪತ್ತಾರ** ಅವರು ಡಾ.ಸಿದ್ದಲಿಂಗಯ್ಯನವರ ಹೊಲೆಮಾದಿಗರ ಹಾಡು ಕವನ ಸಂಕಲನದ ಕೆಲವು ಗೀತೆಗಳನ್ನು ಪ್ರಸ್ತುತ ಪಡಿಸಿದರು. ಸಂಗೀತ ವಿಭಾಗದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಪ್ರಾರ್ಥನೆ ಗೀತೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು ಮತ್ತು ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು.



ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಶ್ರೀ ಸೋಮಶೇಖರ್ ಬಣ್ಣದಮನೆ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.



ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿ ಮಾನ್ಯ ಕುಲಪತಿಯವರಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಮಾತನಾಡಿದರು.



## ದಲಿತ ಸಂಸ್ಕೃತಿ ಅಧ್ಯಯನ ಪೀಠ
## ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬



ನಾಡೋಜ, ಕವಿ ಡಾ. ಸಿದ್ದಲಿಂಗಯ್ಯ ಅವರ

**ಹೊಲೆಮಾದಿಗರ ಹಾಡು**

**ಸಾಹಿತ್ಯ ಮತ್ತು ಸಾಮಾಜಿಕ ಪ್ರೇರಣೆ**

# ರಾಜ್ಯಮಟ್ಟದ ವಿಚಾರ ಸಂಕಿರಣ

ದಿನಾಂಕ : ಅಕ್ಟೋಬರ್ ೯, ೨೦೨೪ ಬುಧವಾರ, ಬೆಳಗ್ಗೆ ೧೦.೩೦ ಗಂಟೆ
ಸ್ಥಳ: ಮಂಟಪ ಸಭಾಂಗಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಎಲ್ಲರಿಗೂ ಸ್ವಾಗತ

**ಪ್ರೊ. ಎನ್. ಚಿನ್ನಸ್ವಾಮಿ ಸೋಸಲೆ**
ಹಿರಿಯ ಪ್ರಾಧ್ಯಾಪಕರು ಮತ್ತು ಸಂಚಾಲಕರು
ದಲಿತ ಸಂಸ್ಕೃತಿ ಅಧ್ಯಯನ ಪೀಠ
ಕನ್ನಡ ವಿಶ್ವವಿದ್ಯಾಲಯ. ಹಂಪಿ

**ಪ್ರೊ. ವಿಜಯ್ ಪೂಣಚ್ಚ ತಂಬಂಡ**
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

---

**ನಾಡೋಜ, ಕವಿ ಡಾ. ಸಿದ್ಧಲಿಂಗಯ್ಯ ಅವರ ಹೊಲೆಮಾದಿಗರ ಹಾಡು : ಸಾಹಿತ್ಯ ಮತ್ತು ಸಾಮಾಜಿಕ ಪ್ರೇರಣೆ**

ಸ್ವಾಗತ
**ಡಾ. ವಿಜಯ್ ಪೂಣಚ್ಚ ತಂಬಂಡ**
ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಾಸ್ತಾವಿಕ
**ಡಾ. ಎನ್. ಚಿನ್ನಸ್ವಾಮಿ ಸೋಸಲೆ**
ಹಿರಿಯ ಪ್ರಾಧ್ಯಾಪಕರು ಹಾಗೂ ಸಂಚಾಲಕರು,
ದಲಿತ ಸಂಸ್ಕೃತಿ ಅಧ್ಯಯನ ಪೀಠ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಉದ್ಘಾಟನೆ
**ಶ್ರೀ ಸುಬ್ಬು ಹೊಲೆಯರ್**
ಚಿಂತಕರು ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರು

ಮುಖ್ಯ ಅತಿಥಿಗಳು
**ಶ್ರೀಮತಿ ರಮಾಕುಮಾರಿ ಸಿದ್ಧಲಿಂಗಯ್ಯ**
(ಕವಿ ಡಾ. ಸಿದ್ಧಲಿಂಗಯ್ಯ ಅವರ ಧರ್ಮಪತ್ನಿ ಅವರು)

**ಶ್ರೀ ಸೋಮಶೇಖರ್ ಬಣ್ಣದಮನೆ**
ಸಿಂಡಿಕೇಟ್ ಸದಸ್ಯರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಕ್ಷತೆ
**ಡಾ. ಡಿ.ವಿ. ಪರಮಶಿವಮೂರ್ತಿ**
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಂದನಾರ್ಪಣೆ
**ಡಾ. ವಿರೂಪಾಕ್ಷಿ ಪೂಜಾರಹಳ್ಳಿ**
ಹಿರಿಯ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿರೂಪಣೆ
**ಮಣಿಕಂಠ ಹಂಗಳ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

---

ಗೋಷ್ಠಿ - ೧
**ಸಾಹಿತ್ಯ ಪ್ರೇರಣೆ**
ಮಧ್ಯಾಹ್ನ ೧೨ : ೩೦ ಗಂಟೆಗೆ

ವಿಷಯ : ಹೊಲೆಮಾದಿಗರ ಹಾಡು : ಹೊಸ ಕನ್ನಡ ಸಾಹಿತ್ಯಕ್ಕೆ ಪ್ರೇರಣೆ
ಉಪನ್ಯಾಸ: **ಡಾ. ಟಿ. ಯಲ್ಲಪ್ಪ** ಪ್ರಾಧ್ಯಾಪಕರು
ಸ.ಪ್ರ.ದ. ಕಾಲೇಜು, ಕೆ.ಆರ್.ಪುರ, ಬೆಂಗಳೂರು

ವಿಷಯ : ಹೊಲೆಮಾದಿಗರ ಹಾಡು : ಕನ್ನಡ ಸಾಹಿತ್ಯಕ್ಕೆ ಹೊಸ ದೃಷ್ಟಿಕೋನ
ಉಪನ್ಯಾಸ : **ಡಾ. ರವಿಕುಮಾರ ನೀಹಾ** ಸದಸ್ಯರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ, ತುಮಕೂರು

ಅಧ್ಯಕ್ಷತೆ
**ಡಾ. ಬಿ. ಎಂ. ಪುಟ್ಟಯ್ಯ**
ಹಿರಿಯ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿರ್ವಹಣೆ
**ನರಸಿಂಹರಾಜು ಹೆಚ್.ಸಿ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗೋಷ್ಠಿ - ೨
**ಸಾಮಾಜಿಕ ಪ್ರೇರಣೆ**
ಮಧ್ಯಾಹ್ನ ೨ : ೩೦ ಗಂಟೆಗೆ

ವಿಷಯ : ಹೊಲೆಮಾದಿಗರ ಹಾಡು : ಪ್ರಭುತ್ವ, ಜಮೀನ್ದಾರಿಕೆ ಮತ್ತು ಜನತೆ
ಉಪನ್ಯಾಸ: **ಡಾ. ಹೆಚ್.ಡಿ ಉಮಾಶಂಕರ್** ಪ್ರಾಧ್ಯಾಪಕರು
ಸ.ಪ್ರ.ದ. ಕಾಲೇಜು, ರಾಮನಗರ

ವಿಷಯ : ಹೊಲೆಮಾದಿಗರ ಹಾಡು : ಮಹಿಳೆ, ಶೋಷಣೆ ಮತ್ತು ಸಮಾಜ
ಉಪನ್ಯಾಸ : **ಡಾ. ಅನುಸೂಯ ಕಾಂಬ್ಳೆ** ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಅಧ್ಯಕ್ಷತೆ
**ಡಾ. ಚಲುವರಾಜು** ಹಿರಿಯ ಪ್ರಾಧ್ಯಾಪಕರು ಹಾಗೂ
ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿರ್ವಹಣೆ
**ಪ್ರದೀಪ ಹೆಚ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

---

**ಹೊ**ಲೆಮಾದಿಗರ ಹಾಡು ಕವನ ಸಂಕಲನ ಪ್ರಕಟಗೊಂಡು ಇಂದಿಗೆ ೪೯ ವರ್ಷಗಳು. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಈ ಸಾವಿರಾರು ವರ್ಷಗಳ ಒಪ್ಪಿತ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚರಿತ್ರೆಗೆ ಚಲನಶೀಲತೆ ಒದಗಿಸಿದ್ದು ಕವಿ ಸಿದ್ಧಲಿಂಗಯ್ಯ ಅವರು ಬರೆದ ಹೊಲೆಮಾದಿಗರ ಹಾಡು ಎಂಬ ಶೋಷಿತ ಜನಪರ ಕವನಸಂಕಲನ. ಈ ಕವನಸಂಕಲನ ಶತಶತಮಾನಗಳಿಂದ ಮಾತು ಬಂದರೂ ಮೂಕರಾಗಿದ್ದವರಿಗೆ ಮಾತು ಭರಿಸಿತು. ಶತಶತಮಾನಗಳಿಂದ ದುಡಿದರು ಹಸಿವಿನಿಂದ ಮಲಗಿದ್ದವರಿಗೆ ಅದಕ್ಕೆ ಕಾರಣಗಳನ್ನು ತಿಳಿಸಿತು. ಇಲ್ಲಿನ ಕವಿತೆಯ ಸಾಲುಗಳು ನೆಲದ ಜನ ತನ್ನ ಮೂಲಭೂತ ಹಕ್ಕುಗಳನ್ನು ಹರಣ ಮಾಡಿದವರ ವಿರುದ್ಧ ರೋಷಾಗ್ನಿಯಾಗಿ ಹೊರಹೊಮ್ಮಲು ಪ್ರೇರೇಪಿಸಿತು. ಬಂಡವಾಳಶಾಹಿ, ಊಳಿಗಮಾನ್ಯಶಾಹಿ, ಪುರೋಹಿತಶಾಹಿಗಳ ಸ್ವಾರ್ಥ ಸಾಧನೆಯ ಇಕ್ಕಳದಲ್ಲಿ ಸಿಲುಕಿ ತಮ್ಮ ಮುಚ್ಚಿದ ಅಜ್ಞಾನದ ಕಣ್ಣುಗಳನ್ನು ಬೆಂಕಿಯ ಉಂಡೆಗಳಾಗಿ ತೆರೆದು ತಮ್ಮ ಮೂಲಭೂತ ಹಕ್ಕುಗಳ ಸ್ವಾತಂತ್ರ್ಯವನ್ನು ಪ್ರತಿಪಾದನೆ ಮಾಡಿದ ಸಂದರ್ಭವು ಆಗಿತ್ತು. ರಾಜಪ್ರಭುತ್ವದ ಮಾದರಿಯಲ್ಲಿಯೇ ಪ್ರಜಾಪ್ರಭುತ್ವದ ಸರ್ಕಾರಗಳು ನಡೆಸುತ್ತಿದ್ದ ಅನೀತಿಗಳನ್ನು ಒಡಲಾಳದ ಆಕ್ರೋಶದಿಂದ ಈ ಕವನದ ಸಾಲುಗಳು ಪ್ರಶ್ನೆ ಮಾಡಿದವು. ಈ ನೆಲದ ಸಾಂಸ್ಕೃತಿಕ ವಾರಸುದಾರರಾದ ಹೊಲೆಮಾದಿಗರ ಎಚ್ಚರಿಕೆಯ ಗಂಟೆಗಳಾಗಿ ಕವನದ ಸಾಲುಗಳು ಮನ ಹಾಗೂ ಮನೆಗಳನ್ನು ಸ್ವಾಭಿಮಾನದ ಕಿಚ್ಚುಹಚ್ಚಿದ ರೀತಿಯಲ್ಲಿ ಆವರಿಸಿದವು. ಇವರ ಮನೆಯಲ್ಲಿ ಮಾರಿಹಬ್ಬಗಳಲ್ಲಿ ಮಾತ್ರ ಹೊರಬರುತ್ತಿದ್ದ ತಮಟೆಗಳು ಹೊಲೆಮಾದಿಗರ ಆಕ್ರೋಶದ ಹಾಡಿಗೆ ದನಿ-ಧ್ವನಿಯಾಗಿ ದಿನಂಪ್ರತಿ ಬೀದಿ ಬೀದಿಗಳಲ್ಲಿ ಘರ್ಜಿಸಿದವು. ಶತಮಾನಗಳಿಂದ ಮೂಕರಾಗಿದ್ದ ಜನರಿಗೆ ಮಾತು ಬಂದು ಆಕ್ರೋಶದ ಧ್ವನಿಯಾಗಿ ಇವು ಹೊರಹೊಮ್ಮಿದವು. ರಾಜಪ್ರಭುತ್ವವನ್ನು ಪ್ರಶ್ನೆಮಾಡುತ್ತಾ ನಿಜ ಪ್ರಜಾಪ್ರಭುತ್ವವನ್ನು ಜನರಿಗೆ ತಿಳಿಸಿದವು. ಶತಮಾನಗಳ ಹಸಿವು, ದೇವಾಲಯ ಮತ್ತು ದೇವರ ಹೆಸರಿನಲ್ಲಿ ತಾವು ಮಾಡುತ್ತಿದ್ದ ಅಮಾನವೀಯ ಪದ್ಧತಿಗಳನ್ನು ಪ್ರಶ್ನೆ ಮಾಡಿದವು. ದಿನವಿಡೀ ದುಡಿದು ಉಳ್ಳವರ ಮನೆಯ ಹೊಟ್ಟೆ ತುಂಬಿಸಿ ತಾವು ಮಾತ್ರ ಹಸಿವಿನಿಂದ ಮಲಗಿದ ಆಕ್ರಂಧನವನ್ನು ಪ್ರಶ್ನಿಸಿದವು. ನಿಜಾರ್ಥದಲ್ಲಿ ಹೇಳುವುದಾದರೆ ರಾಷ್ಟ್ರಕ್ಕೆ ರಾಷ್ಟ್ರಗೀತೆ, ರಾಜ್ಯಕ್ಕೆ ನಾಡಗೀತೆ ಎಷ್ಟು ಮುಖ್ಯವಾಗಿದ್ದವೋ ಆ ಮಾದರಿಯಲ್ಲಿ ಕನ್ನಡ ನೆಲದ ದಲಿತ ಚಳುವಳಿಗೆ ಹೊಲೆಮಾದಿಗರ ಹಾಡಿನ ಕವಿತೆಗಳೇ ದಮನಿತರ ಗೀತೆಗಳಾದವು.

**ದಲಿತರು ಬಂದರು ದಾರಿ ಬಿಡಿ - ದಲಿತರ ಕೈಗೆ ರಾಜ್ಯಕೊಡಿ** ಎಂಬ ರಾಜಕೀಯ ಆಕಾಂಕ್ಷೆಯ ಮಹತ್ವದ ಅಂಶಗಳನ್ನು ಈ ನೆಲದ ಜನರ ಎದೆಯಲ್ಲಿ ಬಿತ್ತಿ, ಅದನ್ನು ಮೊಳಕೆ ಭರಿಸಿ, ಫಲವತ್ತಾಗಿ ಬೆಳೆಸಿದ್ದೇ ಹೊಲೆಮಾದಿಗರ ಹಾಡು ಕವನ ಸಂಕಲನದ ಸಾಲುಗಳು.

ಇಂತಹ ಮಹತ್ವದ ಕವನಸಂಕಲನ ೧೯೭೫ರಲ್ಲಿ ಪ್ರಕಟಗೊಂಡು ಇಂದಿಗೆ ೪೯ ವರ್ಷಗಳು. ಈ ಜ್ಞಾನಪರ ಕವನಸಂಕಲನ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಕನ್ನಡ ವಿಶ್ವವಿದ್ಯಾಲಯದ ದಲಿತ ಸಂಸ್ಕೃತಿ ಅಧ್ಯಯನ ಪೀಠ ಹಮ್ಮಿಕೊಂಡಿದೆ. ಇಂದು ನಮ್ಮ ನಡುವೆ ಕವಿಗಳು ಭೌತಿಕವಾಗಿ ಇಲ್ಲದಿದ್ದರು, ಬೌದ್ಧಿಕವಾಗಿ ಅವರು ಹಚ್ಚಿದ ಅರಿವಿನ ದೀಪದ ಮೂಲಕ ನಮ್ಮ ನಡುವೆ ಇದ್ದೇ ಇದ್ದಾರೆ. ಈ ಹಿನ್ನೆಲೆಯಲ್ಲಿ ಇಂತಹ ಮಹತ್ವದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ.

**ಎಲ್ಲರಿಗೂ ಆದರದ ಸ್ವಾಗತ.**